ದಿನಾಂಕಃ 28-08-2020 ರಂದು ಸಾಕ್ಷಿಯ ಪ್ರಮಾಣೀಕೃತ ಹೇಳಿಕೆಯನ್ನು ವಿಡಿಯೋ ಕಾನ್ಫರೇನ್ಸ್ ಮೂಲಕ ಪಡೆದುಕೊಳ್ಳಲು ಪ್ರಮಾಣ ವಚನ ಬೋಧಿಸಲಾಯಿತು.

ಇಂದು ನಾನು ನನ್ನ ಪ್ರಮಾಣೀಕೃತ ಹೇಳಿಕೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ ಹಾಗೂ ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ದಾಖಲೆಗಳ ವಿವರ ಈ ಕೆಳಗಿನಂತಿವೆ.

1. ಆರೋಪಿಯು ನೀಡಿದ ಚೆಕ್ ನಂಃ 000710, ದಿನಾಂಕಃ 12-09-2019 ನ್ನು ನಿಸಿಃ 1 ಎಂದು ಗುರ್ತಿಸಲಾಯಿತು.
2. ಸಾಕ್ಷಿಯು ನಿಸಿಃ 01 ರಲ್ಲಿರುವ ಆರೋಪಿಯ ಸಹಿಯನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ಸಹಿಯನ್ನು ನಿಸಿಃ 01(ಎ) ಎಂದು ಗುರ್ತಿಸಲಾಯಿತು.
3. ಒಂದು ಬ್ಯಾಂಕ್ ಎಂಡೋರ್ಸ್‌ಮೆಂಟ್‌ನ್ನು ಹಾಜರು ಪಡಿಸಿದ್ದು ಅದನ್ನು ನಿಸಿಃ 02 ಎಂದು ಗುರ್ತಿಸಲಾಯಿತು.
4. ಲೀಗಲ್ ನೋಟಿಸ್‌ನ್ನು ಹಾಜರು ಪಡಿಸಿದ್ದು ಅದನ್ನು ನಿಸಿಃ 03 ಎಂದು ಗುರ್ತಿಸಲಾಯಿತು.
5. ಒಂದು ಅಂಚೆ ರಸೀದಿ ಹಾಜರು ಪಡಿಸಿದ್ದು ಅದನ್ನು ನಿ ಸಿ ಃ 04 ಎಂದು ಗುರುತಿಸಲಾಯಿತು.
6. ಆರೋಪಿ ನೀಡಿದ ಪ್ರತ್ಯುತ್ತರ ಹಾಜರು ಪಡಿಸಿದ್ದು ಅದನ್ನು ನಿ ಸಿ ಃ 05 ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮಾನ್ಯ ನ್ಯಾಯಾಲಯವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಬಳ್ಳಾರಿ.